# ಸದ್ಗತಿ ಕಂಡ ಸಿಗ್ನೇಚರ್ ಶಾಂತಯ್ಯ





ಸಿನಿಮಾ, ಕ್ರೀಡೆ, ರಾಜಕೀಯ, ಕೃಷಿ, ಉದ್ಯಮ ಹೀಗೆ ಹಲವಾರು ರಂಗಗಳಲ್ಲಿ ಉನ್ನತ ಸಾಧನೆ ಮಾಡಿ ಹೆಸರುವಾಸಿಯಾರುವವರು ತಾನೊಬ್ಬ 'ಸೆಲೆಬ್ರಿಟಿ' ಎನಿಸಿಕೊಳ್ಳುವುದು ಸಾಮಾನ್ಯ. ಇದರಾಚೆಗೆ ಇಂತಹ ಸಾಧನೆ ಮಾಡುವುದು ಅಪರೂಪ. ಕಲಾತ್ಮಕವಾಗಿ ಸಹಿಮಾಡುವ ಮೂಲಕ ಸೆಲೆಬ್ರಿಟಿಯಾಗಬಹುದು ಎಂದು ತೋರಿಸಿಕೊಟ್ಟದ್ದು ಉತ್ತರಕನ್ನಡದ ಹೊನ್ನಾವರ ಉಪನೋಂದಣಾಧಿಕಾರಿಯಾಗಿ ಸೇವೆ ಸಲ್ಲಿಸಿ ಕಳೆದ ವರ್ಷ ನಿವೃತ್ತಿಯಾದ ನೆಲಮಂಗಲದ ಕುಂಬಾಳು ಗ್ರಾಮದ ಶಾಂತಯ್ಯ.

ಇವರ ಸಹಿ ನೋಡಲು ಸುಂದರ ಹಾಗೂ ಆಕರ್ಷಣೀಯ. ಯಾರಿಂದಲೂ ನಕಲು ಮಾಡಲಾಗದಂತಹ ಅದ್ಭುತ ಸಹಿ ಅದು. ಇವರ ಕಲಾತ್ಮಕ ಸಹಿ ಗಮನಿಸಿದ ಯುನೆಸ್ಕೊ (UNESCO) ಇವರ ಸಹಿಯನ್ನು ಕೊಂಡಾಡಿ 'Most spectacular signature in the World' ಎಂದು ಘೋಷಣೆ ಮಾಡಿದ್ದು, ಭಾರತೀಯರಿಗೆ ಅದರಲ್ಲೂ ವಿಶೇಷವಾಗಿ ಕನ್ನಡಿಗರಿಗೆ ಹೆಮ್ಮೆಯ ವಿಷಯ! ಇವರ ಕಲಾತ್ಮಕ ಶೈಲಿಯ ಸಹಿಯನ್ನು ಮೆಚ್ಚಿ ಹೈಕೋರ್ಟ್‌ನ ನ್ಯಾಯಾಧೀಶರೊಬ್ಬರು ಇವರನ್ನು ಸನ್ಮಾನಿಸಿ ಗೌರವಿಸಿವೆ. ಅನೇಕ ಸಂಘ ಸಂಸ್ಥೆಗಳು ಕೂಡ ಇವರನ್ನು ಗೌರವಿಸಿದ್ದಾರೆ. ದುರಂತದ ವಿಷಯ ಎಂದರೆ, ಸೆಪ್ಟೆಂಬರ್ 8ರಂದು ಶಾಂತಯ್ಯ ಅವರು ಇಹಲೋಕ ತ್ಯಜಿಸಿದ್ದಾರೆ. ಸಾವಿನಲ್ಲೂ ಸಾರ್ಥಕತೆ ಮೆರೆಯುವ ಸಲುವಾಗಿ ಅವರ ಕಣ್ಣುಗಳನ್ನು ದಾನಮಾಡಲಾಗಿದೆ.

–ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ

# ತೋಟದ ಲಕ್ಷ್ಮಿ ಪೂಜೆ

ಭೂತಾಯಿಯನ್ನು ಒಬ್ಬೊಬ್ಬರು ಒಂದೊಂದು ರೀತಿ ಪೂಜಿಸುತ್ತಾರೆ. ಚಿತ್ರದುರ್ಗದ ಗ್ರಾಮೀಣ ಭಾಗಗಳಲ್ಲಿ ತೋಟದ ಲಕ್ಷ್ಮಿ ಎಂಬ ಹೆಸರಿನಿಂದ ಭೂ ದೇವಿಯನ್ನು ಆರಾಧಿಸುವ ಪದ್ಧತಿ ಇದೆ. ಈ ಭಾಗದಲ್ಲಿ ಅಡಿಕೆ ತೆಂಗಿನ ತೋಟವುಳ್ಳವರು ವರ್ಷಕ್ಕೊಮ್ಮೆ ಫಲ ಹಿಡಿದಿರುವ ಮರವನ್ನು ತೋಟದ ಲಕ್ಷ್ಮಿ ಪೂಜೆಗೆ ಆಯ್ಕೆ ಮಾಡಿಕೊಳ್ಳುತ್ತಾರೆ. ಅಡಿಕೆ ಮರದ ಕೆಳಗೆ ಚಪ್ಪರ ಹಾಕಿ, ಮರಕ್ಕೆ ದೇವಿಯ ಮುಖ ಪದ್ಮವನ್ನು ಕಟ್ಟಿ, ಸೀರೆ ರವಿಕೆ ಉಡಿಸಿ, ಒಡವೆಗಳನ್ನು ತೊಡಿಸಿ ಅಲಂಕಾರ ಮಾಡುತ್ತಾರೆ. ಹೀಗೆ ಅಲಂಕಾರಗೊಂಡ ಲಕ್ಷ್ಮಿಗೆ ಅರಿಶಿನ ಕುಂಕುಮ ಹೂಗಳು ಇನ್ನಷ್ಟು ಮೆರುಗು ನೀಡುತ್ತದೆ. ಇದನ್ನು ನೋಡುವುದೇ ಚೆಂದ.

ಲಕ್ಷ್ಮಿಗೆ ಪ್ರಿಯವಾದ ವಿವಿಧ ಭಕ್ಷ್ಯಗಳನ್ನು ತೋಟದಲ್ಲೇ ತಯಾರಿಸಿ, ಭೂಮಿ ಯಾವಾಗಲೂ ಫಲವತ್ತತೆಯಿಂದ ಕೂಡಿರಲೆಂದು ಎಡೆಯನ್ನು ಭೂಮಿಯಲ್ಲೇ ಹಾಕಿ ಮುಚ್ಚುತ್ತಾರೆ. ನಂತರ ನೆಂಟರಿಷ್ಟರೊಂದಿಗೆ ಕೂಡಿ ತಯಾರಿಸಿದ ಅಡುಗೆಯನ್ನು ತೋಟದಲ್ಲೇ ಸವಿಯುತ್ತಾರೆ. ಈಚೆಗೆ ನನ್ನ ಹಿತೈಷಿಗಳು ಒಬ್ಬರ ತೋಟಕ್ಕೆ ಹೋಗಿದ್ದಾಗ ಈ ಆಚರಣೆಯ ಬಗೆಯನ್ನು ಕಣ್ತುಂಬಿ ಕೊಂಡಾಗಿನ ಚಿತ್ರಗಳಿವು.

–ಟಿ.ಎಸ್. ಪ್ರತಿಭಾ, ಚಿತ್ರದುರ್ಗ





# ಪಾತಾಳಗರಡಿ

ಹಿಂದಿನ ಕಾಲದಲ್ಲಿ ಗ್ರಾಮೀಣ ಪ್ರದೇಶದ ಮನೆಗಳ ಅಂಗಳದಲ್ಲಿ ಇರುತ್ತಿದ್ದ ಬಾವಿಗಳಿಗೆ ಕೊಡಪಾನವೋ, ಏನಾದರೂ ಸಾಮಗ್ರಿಗಳು ಬಿದ್ದರೆ ಮನುಷ್ಯರು ಇಳಿಯಲು ಭಯಪಡುತ್ತಿದ್ದರು. ಆಗ ನೆರವಿಗೆ ಬರುತ್ತಿದ್ದದ್ದೇ ಈ ಚಿತ್ರದಲ್ಲಿ ಕಾಣುತ್ತಿರುವ ಪಾತಾಳಗರಡಿ. ಬಾವಿಗೆ ಬಿದ್ದ ವಸ್ತುಗಳನ್ನು ಮೇಲೆತ್ತಲು ಜನರು ಇದನ್ನು ಹೆಚ್ಚಾಗಿ ಉಪಯೋಗಿಸುತ್ತಿದ್ದರು. ಹತ್ತಾರು ಕೊಕ್ಕೆಗಳಿರುವ ಈ ಪಾತಾಳಗರಡಿಯೂ ವಿಶೇಷವಾದದ್ದು. ಬಾವಿಗಳಿಗೊಂದರಂತೆ ಇರುತ್ತಿದ್ದ ಪಾತಾಳಗರಡಿಯು ಈಗ ಮನೆಯಂಗಳದ ಬಾವಿಗಳಂತೆಯೇ ಅಪರೂಪ.

–ರಾಂಚಂದ್ರಕೊಪ್ಪಲು, ತೀರ್ಥಹಳ್ಳಿ

